WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2010


॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-10 ಸಂಚಿಕೆ-5 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011.

ಶ್ರೀ ಕೃಷ್ಣಾಯನ - ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು ಪುಟ-2

''ಹರಿಕಥೆ ಅಪೇಕ್ಷಿತವೇ? ಅನಪೇಕ್ಷಿತವೇ?-೩ - ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್. ಪುಟ-4



ತುಳುನಾಡಿನಲ್ಲಿ ಬ್ರಾಹ್ಮಣ್ಯ ಸಂಗ್ರಹ : ಸಿ.ಎಸ್.ರಾವ್. ಪುಟ-4

ವೈದ್ಯಕೀಯ ವೇದಿಕೆ– ಪ್ರಶ್ನೆ ಮತ್ತು ಉತ್ತರ - ಡಾ| ವೈ. ಸುದರ್ಶನ ರಾವ್ ಪುಟ-5


# ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳು ಉಡುಪಿಗೆ...

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಉಡುಪಿಗೆ ಆಗಮಿಸಲಿದ್ದಾರೆ.

ಆದಿಶಂಕರಾಚಾರ್ಯರ ಹುಟ್ಟೂರು- ಕೇರಳ ರಾಜ್ಯದ ಕಾಲಟಿ. ಅಲ್ಲಿ ಶಂಕರಜಯಂತಿಯ ವಿಶೇಷ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಕೋಟೆಕಾರು ಶೃಂಗೇರಿ ಮಠ ಶಾಖೆಗೆ ಆಗಮಿಸಿ ಅಲ್ಲಿಂದ ತಾ.06-06-2010ರಂದು ಉಡುಪಿಗೆ ಬಂದು ಶ್ರೀಶಾರದಾ ಮಂಟಪದಲ್ಲಿ ಮೊಕ್ಕಾಂ ಮಾಡಲಿದ್ದಾರೆ.

**ಗುರುರ್ದೇವೋ ಮಹೇಶ್ವರಃ :** ಸ್ಥಾನಿಕ ಬ್ರಾಹ್ಮಣ ಶಿಷ್ಯ ವರ್ಗ ನಮ್ಮ ಅತ್ಯಂತ ಪ್ರೀತಿಯ ಶಿಷ್ಯವರ್ಗ ಎಂದು ನಮ್ಮನ್ನು ಹೃತ್ಪೂರ್ವಕವಾಗಿ ಅನುಗ್ರಹಿಸುತ್ತಿರುವವರು ನಮ್ಮ ಪ್ರೀತಿಯ ಶೃಂಗೇರಿ ಜಗದ್ಗುರುಗಳು. ಮಾತೃದೇವೋ ಭವ; ಪಿತೃದೇವೋಭವ; ಆಚಾರ್ಯ ದೇವೋ ಭವ ಎಂದು ನಂಬಿ ಬಂದ ಸನಾತನ ಸಂಸ್ಕೃತಿ ನಮ್ಮದು. ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಮಹೇಶ್ವರ ಎಂದು ಸನಾತನ ಸಂಸ್ಕೃತಿ ಸಾರಿದೆ. ಕೇವಲ ಅಕ್ಷರ ಕಲಿಸಿದಾತ ಗುರುವಾಗಲಾರ. 'ಗುರು' ನಮ್ಮನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ದಾರಿದೀಪ. ಮಾನವನ ಬಾಳನ್ನು ಸಾರ್ಥಕತೆಯೆಡೆಗೆ ಸಾಗಿಸುವ ಅಂಬಿಗನೇ ಗುರು.

ಇದು ಕಲಿಯುಗ! ವಿಜ್ಞಾನ ಯುಗದ ಆಮಿಷಗಳಿಂದ ಆಕರ್ಷಿತನಾಗಿ ವಿಕೃತ- ಸಂಪನ್ನತೆಗೆ ಶರಣಾಗಿರುವ ಮಾನವನ ಜ್ಞಾನಚಕ್ಷುಗಳಿಗೆ ಅಜ್ಞಾನ ತಿಮಿರದ ಪೊರೆ ಆವರಿಸಿದೆ. ಸಿಕ್ಕಿದ್ದನ್ನು ಬಾಚಿ ಕಟ್ಟಿಡುವುದೇ ಆದರ್ಶವೆನಿಸಿದೆ. ಕುತಂತ್ರವೇ ಮಂತ್ರವಾಗುತ್ತಿರುವ ಈ ಕಾಲಘಟ್ಟದಲ್ಲಿ ಅಧರ್ಮದ ದವಡೆಯಿಂದ ನಮ್ಮನ್ನು ಬಿಡಿಸಲು ಧರ್ಮಗುರುವಿನ ಉಪದೇಶ ಎಂದಿಗಿಂತ ಇಂದು ಹೆಚ್ಚಾಗಿದೆ. ಈ ದೃಷ್ಟಿಯಿಂದ ನಾವು ಈ ಗುರುಗಳನ್ನು ಪಡೆದು ಭಾಗ್ಯಶಾಲಿಗಳಾಗಿದ್ದೇವೆ.



ಋಷ್ಯಶೃಂಗಪುರಾಧೀಶಂ ತುಂಗಾತೀರ ನಿವಾಸಿನಮ್ ।
ಭಕ್ತಾಮೋದಪ್ರದಂ ವಂದೇ ಭಾರತೀತೀರ್ಥ ಸದ್ಗುರುಮ್ ॥

**ಎಷ್ಟು ಹತ್ತಿರ ನಮಗೆ ಶೃಂಗೇರಿ! :** ಕೇರಳದ ಕಾಲಟಿಯಲ್ಲಿ ಜನಿಸಿದ ಆದಿಶಂಕರಾಚಾರ್ಯ ಮುನಿವರರು ಬಂದು ನೆಲೆಸಿದ ಪುಣ್ಯಭೂಮಿ ಋಷ್ಯಶೃಂಗಪುರ-ಇಂದಿನ ಶೃಂಗೇರಿ. ಆದಿಶಂಕರಾಚಾರ್ಯರಿಂದ ಸ್ಥಾಪಿತವಾದ ಶ್ರೀ ಶಾರದಾ ಪೀಠದಲ್ಲಿ ಶ್ರೀ ಶ್ರೀ ಭಾರತೀತೀರ್ಥರು 36ನೇ ಯತಿಶ್ರೇಷ್ಠರು. ಮಹಾಮಹಿಮರೂ, ಮಹಾಜ್ಞಾನಿಗಳೂ ಆದ ಆಚಾರ್ಯ ವರೇಣ್ಯರಿಂದ ಸೇವಿಸಲ್ಪಟ್ಟ ಶ್ರೀಶಾರದಾ ಪೀಠ ನಮ್ಮ ಜಗದ್ಗುರು ಪೀಠ ಎಂಬುದು ಅನಂತ ಸಂತಸವನ್ನು ನೀಡುತ್ತದೆ. ಪ್ರಸಕ್ತ ಈ ದಿವ್ಯ ಪೀಠದ ಪೀಠಾಧೀಶರಾಗಿ ದೇಶ ವಿದೇಶಗಳಲ್ಲಿರುವ ಶಿಷ್ಯವೃಂದವನ್ನು ಪ್ರೀತಿಯಿಂದ ಅನುಗ್ರಹಿಸುತ್ತಾ ಧರ್ಮಬೋಧೆ ಮಾಡುತ್ತಿರುವವರು ನಮ್ಮ ಜಗದ್ಗುರುಗಳು.

ನನ್ನ ಪ್ರೀತಿಯ ಶಿಷ್ಯವರ್ಗ ಎಂದು ಕರೆಯುತ್ತಾ ನಿರಂತರ ಅನುಗ್ರಹಿಸುತ್ತಿರುವ ನಮ್ಮ ಪ್ರೀತಿಯ ಜಗದ್ಗುರುಗಳನ್ನು ಇಚ್ಛೆಯಾದಾಗ ನೋಡಿ ಆಶೀರ್ವಾದ ಪಡೆಯುವಷ್ಟು ಸಮೀಪವಿದೆ ಶೃಂಗೇರಿ. ಜಗದ್ಗುರುಗಳನ್ನು ನೋಡಲು ದೇಶದ ಮೂಲೆ ಮೂಲೆಗಳಿಂದ ಪ್ರತಿದಿನ ಸಾವಿರಾರು ಜನ ನರಸಿಂಹವನದ ಗುರುಭವನಕ್ಕೆ ಆಗಮಿಸುತ್ತಾರೆ. ಆಶೀರ್ವಚಿಸಿ ಮನಸ್ಸು ಸೋಲದ, ಮಂತ್ರಾಕ್ಷತೆ ನೀಡಿ ಕೈ ಸೋಲದ ತನ್ಮಯತೆ ಗುರುಗಳಲ್ಲಿ, ಆ ನಡುವೆ ದೊಡ್ಡ ಸರತಿ ಸಾಲಿನಲ್ಲಿ ಸಾಗಿ ಶಾರದಾ ಮಂಟಪದಿಂದ ಬಂದವರು ಎಂದರೆ ವಿಶೇಷ ಮಂದಹಾಸ. ನಮ್ಮ ಹೃದಯದಲ್ಲಿ ಧನ್ಯತೆಯ ಮಿಂಚು. ಈ ಗುರು-ಶಿಷ್ಯಭಾವ ಸದಾ ಜಾಗೃತವಾಗಿರಬೇಕು. ಇಲ್ಲದಿದ್ದರೆ ಅಭಿಮಾನ ಹೀನರಾಗುತ್ತೇವೆ ಅಲ್ಲವೇ?

ಈ ಬಾರಿ ಗುರುಗಳು ಉಡುಪಿಗೆ ಬರುತ್ತಿದ್ದಾರೆ. ಭಕ್ತರ ಬಳಿಗೆ ದೇವರು ಬಂದಂತೆ. ತಾ.6-6-2010ರಂದು ಸಂಜೆ ಶ್ರೀಶಾರದಾ ಮಂಟಪಕ್ಕೆ ಆಗಮಿಸಿ ಎರಡು ದಿನಗಳ ಕಾಲ ಇಲ್ಲಿ ಮೊಕ್ಕಾಂ ಮಾಡಲಿರುವ ಜಗದ್ಗುರುಗಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿ, ಧೂಳೀ ಪಾದಪೂಜೆ ಮಾಡಿ, ರಾತ್ರಿ ಚಂದ್ರಮೌಳೀಶ್ವರ ಪೂಜೆ ವೀಕ್ಷಿಸಿ ಮರುದಿನ ಬೆಳಿಗ್ಗೆ ಗುರುಗಳಿಂದ ಆಶೀರ್ವಚನವನ್ನು ಆಲಿಸಿ, ಅನುಗ್ರಹಪೂರ್ವಕ ಮಂತ್ರಾಕ್ಷತೆ ಪಡೆಯುವ ಭಾಗ್ಯ ನಮಗೊದಗಿದೆ. ಬನ್ನಿ... ಎಲ್ಲರೂ ಒಂದಾಗಿ ಗುರುಗಳ ದರ್ಶನ ಪಡೆದು ಪುನೀತರಾಗೋಣ.

**(ಕಾರ್ಯಕ್ರಮ ವಿವರ ಮತ್ತು ಸೇವಾ ವಿವರ 3ನೇ ಪುಟದಲ್ಲಿ)**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ),** ಕುಂಜಿಬೆಟ್ಟು, ಉಡುಪಿ - 2.



ಇದರ ಆಶ್ರಯದಲ್ಲಿ

## ಶ್ರೀ ಶಂಕರಜಯಂತಿ ಕಾರ್ಯಕ್ರಮವು

ತಾ.19-05-2010 ಬುಧವಾರದಂದು ನಡೆಯಲಿದೆ.

ಇದೇ ದಿನ **ಸಾಮೂಹಿಕ ಉಪನಯನ**


ಹಾಗೂ ಶ್ರೀಶಾರದಾ ದೇವಸ್ಥಾನದಲ್ಲಿ ವಿಶೇಷ ಪೂಜೆಯೂ ಜರಗಲಿದೆ.

ಶ್ರೀ ಸಾಂತೂರು ಸದಾಶಿವ ರಾವ್ (ನಿವೃತ್ತ ಪಾಧ್ಯಾಪಕರು) ಇವರಿಂದ ಶ್ರೀಶಂಕರರ ತತ್ವಗಳ ಬಗ್ಗೆ ಬೆಳಿಗ್ಗೆ 11-00 ಗಂಟೆಗೆ ಪ್ರವಚನ

ಸರ್ವರಿಗೂ ಆದರದ ಸ್ವಾಗತ : - ಕಾರ್ಯದರ್ಶಿ

ಆಸಕ್ತ ಸಮಾಜಬಾಂಧವರು ಇದರಲ್ಲಿ ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ಶ್ರೀಶಾರದಾ ಮಂಟಪದ ಮೆನೇಜರ್‌ರಲ್ಲಿ ಮುಂಚಿತವಾಗಿ ತಿಳಿಸಲು ಕೋರಲಾಗಿದೆ.

# ಇನ್ನ ರಾಮಮೋಹನ ರಾವ್ ಅವರ ''ನಾನು ಕಂಡ ನನ್ನ ದೇಶ'' ಕೃತಿ ಬಿಡುಗಡೆ



ದೆಹಲಿಯಲ್ಲಿರುವ ಭಾರತ ಸರಕಾರದ ಮಾಜಿ ಪ್ರಧಾನ ವಾರ್ತಾಧಿಕಾರಿ ಹಾಗೂ ಪ್ರಧಾನಿಗಳ ಮಾಧ್ಯಮ ಸಲಹೆಗಾರರಾಗಿದ್ದ ಶ್ರೀ ಇನ್ನ ರಾಮಮೋಹನ ರಾವ್ ಅವರ 'ನಾನು ಕಂಡ ನನ್ನ ದೇಶ' ಕೃತಿ ತಾ.28-3-2010ರಂದು ಬೆಂಗಳೂರಿನ ಮಹಾರಾಷ್ಟ್ರ ಮಂಡಲ್‌ನ ಸಭಾಂಗಣದಲ್ಲಿ ಬಿಡುಗಡೆಗೊಂಡಿತು.

(...3ನೇ ಪುಟಕ್ಕೆ)

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ


ಅಮೇರಿಕಾದ ಪ್ರಖ್ಯಾತ ಪತ್ರಿಕಾ ಸಂಪಾದಕ ಸರ್ ವಾಲ್ಟರ್ ಥ್ಯಾರ್ ಅವರು ಉತ್ತಮ ವಾಗ್ಮಿ ಎಂದು ಹೆಸರು ಪಡೆದಿದ್ದರು. ಅವರನ್ನು ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಹಲವಾರು ಸಂಘ ಸಂಸ್ಥೆಗಳಲ್ಲಿ ಗೌರವ ಉಪನ್ಯಾಸಕರಾಗಿ ಆಹ್ವಾನಿಸಲಾಗುತ್ತಿತ್ತು. ಕಾರಣವೇನೆಂದರೆ ಅವರು ಯಾವುದೇ ಸಭೆಗೆ ಹೋಗಬೇಕಾದರೂ ಅದಕ್ಕೆ ಸಾಕಷ್ಟು ತಯಾರಿ ನಡೆಸುತ್ತಿದ್ದರು. ಅಲ್ಲಿ ನಡೆಯಬಹುದಾದ ಅನೇಕ ಘಟನೆಗಳ ಬಗ್ಗೆ ಬೇರೆ ಬೇರೆ ಕೋನಗಳಿಂದ ತಮ್ಮ ಆಳವಾದ ಅನುಭವದಿಂದ ಯೋಚಿಸಿ ಅದನ್ನು ಎದುರಿಸಲು ತಾನು ಯಾವ ರೀತಿಯ ಮಾತಿನ ಅಸ್ತ್ರಗಳನ್ನು ಉಪಯೋಗಿಸಬೇಕೆಂದು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಅಂತೆಯೇ ಸಭೆಯಲ್ಲಿ ವಿಷಯಕ್ಕೆ ವಿರುದ್ಧವಾಗಿ ಮಾತಾಡಬೇಕಾದರೂ ಪ್ರತಿಯೊಂದು ಪದವನ್ನು ತೂಕ ಮಾಡಿ ಮಾತಾಡುತ್ತಾರೆ. ಅಲ್ಲದೆ ಎಲ್ಲಿಯೂ ಅಸಂವಿಧಾನಿಕ ಪದಗಳು ಬರದಂತೆ ನೋಡಿಕೊಳ್ಳುತ್ತಾರೆ. ಈ ಮೂಲಕ ತನ್ನ ಸ್ಪಷ್ಟ ನಿಲುವನ್ನು ಪ್ರತಿಪಾದಿಸುತ್ತಾರೆ.

ಇಂದು ನಡೆಯುವ ಸಭೆ ಸಮಾರಂಭಗಳಲ್ಲಿ ಆಗುವ ಮಾತಿನ ಚಕಮಕಿ, ಬೈಗುಳ ಕೆಲವೊಮ್ಮೆ ಮಾರಾಮಾರಿಗಳನ್ನು ಗಮನಿಸುವಾಗ ಸಭೆಗೆ ಬರುವಾಗ ಸಭೆಯ ನಡಾವಳಿ ಬಗ್ಗೆ, ನಡಾವಳಿಯಲ್ಲಿಯ ವಿಷಯಗಳ ಬಗ್ಗೆ ಸಾಕಷ್ಟು ತಯಾರಿ ಮಾಡದೆ ಸಭೆಯಲ್ಲಿ ಕುಳಿತುಕೊಳ್ಳುವುದು ಕಂಡು ಬರುತ್ತದೆ. ವಿಷಯಗಳ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿದ್ದಾಗ ಸಭೆಯಲ್ಲಿ ಗಲಿಬಿಲಿಗೊಂಡಾಗ ಅಸಂವಿಧಾನಿಕ ಪದಗಳು ಬಾಯಿಂದ ಬರುವುದು ಸಹಜ. ಈ ಕಾರಣದಿಂದಲೇ ಸಭೆಯಲ್ಲಿ ಗಲಾಟೆ ಮಾರಾಮಾರಿಗಳು ನಡೆಯುವುದೆಂದೂ ಹೇಳಬಹುದು.

ಆದ್ದರಿಂದ ಯಾವುದೇ ಸಭಾಕಲಾಪಕ್ಕೆ ಹೋಗಬೇಕಾದಲ್ಲಿ ನಾವು ಸಭೆಯ ಬಗ್ಗೆ ಸಾಕಷ್ಟು ತಿಳಿದುಕೊಂಡು ಅದಕ್ಕೆ ಸೂಕ್ತವಾದ ಉತ್ತರವನ್ನು ಸಂವಿಧಾನಿಕ ಭಾಷೆ ಬಳಸಿ ನೀಡಿದಲ್ಲಿ ಸಭಾಕಲಾಪ ಸೂಕ್ತ ರೀತಿಯಲ್ಲಿ ನಡೆಯುವುದರಲ್ಲಿ ಸಂಶಯವಿಲ್ಲ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ಶ್ರೀಕೃಷ್ಣನೇ ಜಗತ್ಪಿತನೆಂಬುದು ಅವನ ಅರಿವಿಗೆ ಬಂದಿತು. ಅವನು ಕೂಡಲೇ ಮೋಡಗಳನ್ನು ಉಪಸಂಹರಿಸಿದನು. ಆಕಾಶ ಸ್ವಚ್ಛವಾಗಿ ಸೂರ್ಯನ ಬಿಸಿಲು ಭೂಮಿಯ ಮೇಲೆ ಬಿತ್ತು. ಆಗ ಕೃಷ್ಣನು ಗೋವರ್ಧನದ ಕೆಳಗಿದ್ದವರನ್ನೆಲ್ಲ ತಂತಮ್ಮ ಸ್ಥಳಗಳಿಗೆ ತೆರಳಲು ಸೂಚಿಸಿದನು. ಎಲ್ಲರೂ ಅವನೆಂದಂತೆ ಮಾಡಿದರು. ಅನಂತರ ಭಗವಂತನು ಗೋವರ್ಧನವನ್ನು ಸ್ವಸ್ಥಾನದಲ್ಲಿ ಸ್ಥಾಪಿಸಿದನು. ಈ ಲೀಲೆಯಿಂದ ಇಂದ್ರನ ಗರ್ವಭಂಗವಾಯಿತು. ಅವನು ಬಂದು ಕೃಷ್ಣಚರಣಗಳಲ್ಲಿ ತಲೆಯಿಟ್ಟು ಅವನನ್ನು ಸ್ತುತಿಸಿದನು. ದೇವದೇವನು ಅವನನ್ನು ಕ್ಷಮಿಸಿದನು. ಅಷ್ಟರಲ್ಲಿ ಸ್ವರ್ಗದ ಕಾಮಧೇನು ತನ್ನ ಸಂತಾನಸಹಿತ ಕೃಷ್ಣನ ಮುಂದೆ ಕಾಣಿಸಿಕೊಂಡಳು. ಅವಳು ಕೃಷ್ಣಾವತಾರದ ಪರಮಾತ್ಮನಿಗೆ ನಮಿಸಿ ಹೇಳಿದಳು, “ಪರಮೇಶ್ವರ, ನಾನು ಬ್ರಹ್ಮದೇವನ ಅಣತಿಯಂತೆ ನಿನಗೆ ಇಂದ್ರನ ಸಿಂಹಾಸನದಲ್ಲಿ ಪಟ್ಟಾಭಿಷೇಕ ಮಾಡಲು ಬಂದಿರುವೆನು”.

ಕಾಮಧೇನು ತನ್ನ ಹಾಲಿನಿಂದ ಕೃಷ್ಣ ಪರಮಾತ್ಮನಿಗೆ ಅಭಿಷೇಕ ಮಾಡಿದಳು. ದೇವತೆಗಳ ಪ್ರೇರಣೆಯಂತೆ ಇಂದ್ರನ ಐರಾವತವೂ ತನ್ನ ಸೊಂಡಿಲಿನಿಂದ ಅವನ ಮೇಲೆ ಆಕಾಶ ಗಂಗೆಯ ನೀರನ್ನು ಸುರಿಸಿ ಅವನನ್ನು ‘ಗೋವಿಂದ’ ಎಂಬ ಹೆಸರಿನಿಂದ ಕರೆಯಿತು. ನಾರದ, ತುಂಬುರು, ದೇವತೆಗಳೆಲ್ಲ ಗೋವಿಂದನ ಸ್ತೋತ್ರ ಮಾಡಿದರು. ಹೂವಿನ ಮಳೆಗರೆದರು. ಗೋವುಗಳು ಹಾಲು ಸುರಿಸಿ ವೃಂದಾವನದ ನೆಲವನ್ನು ಒದ್ದೆ ಮಾಡಿದವು. ಗಿಡ, ಬಳ್ಳಿಗಳಲ್ಲಿದ್ದ ಹೂವುಗಳಿಂದ ಜೇನು ತಾನಾಗಿ ಉಕ್ಕಿ ಹರಿಯಿತು. ಪರ್ವತಗಳಲ್ಲಿದ್ದ ರತ್ನಗಳು ತಾವಾಗಿ ಕಾಣಿಸಿಕೊಂಡವು. ಕ್ರೂರಮೃಗಗಳು ಸಾಧು ಮೃಗಗಳಂತೆ ವರ್ತಿಸಿದವು. ಗೋವಿಂದನ ಅಭಿಷೇಕವಾದ ಮೇಲೆ ಇಂದ್ರಾದಿದೇವತೆಗಳು ಸ್ವರ್ಗಕ್ಕೆ ಹೊರಟುಹೋದರು.

ಒಮ್ಮೆ ನಂದಗೋಪನು ಏಕಾದಶಿಯಂದು ಉಪವಾಸವಿದ್ದು ಜನಾರ್ದನನನ್ನು ಪೂಜಿಸಿದನು. ಅಂದೇ ರಾತ್ರಿ ದ್ವಾದಶಿ ಬಂದುದರಿಂದ ಅವನು ಸ್ನಾನಕ್ಕಾಗಿ ಯಮುನೆಗಿಳಿದನು. ಆದರೆ ಅದು ರಾಕ್ಷಸರ ಸಮಯವೆಂಬುದು ಅವನಿಗೆ ತಿಳಿಯದೇ ಹೋಯಿತು. ಹಾಗೆ ನೀರಿಗಿಳಿದ ನಂದನನ್ನು ವರುಣನ ಸೇವಕನಾದ ಅಸುರನೊಬ್ಬನು ವರುಣಲೋಕಕ್ಕೆ ಎಳೆದುಕೊಂಡು ಹೋದನು. ನೀರಿಗಿಳಿದ ತಮ್ಮೊಡೆಯನು ಕಾಣೆಯಾದುದನ್ನು ತಿಳಿದು ಗೋಪಾಲಕರು ಗಟ್ಟಿಯಾಗಿ ರಾಮಕೃಷ್ಣರನ್ನು ಕರೆಯುತ್ತ ಅಳಲಾರಂಭಿಸಿದರು. ನಂದನು ವರುಣನಿಂದ ಅಪಹರಿಸಲ್ಪಟ್ಟಿರಬಹುದೆಂದು ಊಹಿಸಿದ ಕೃಷ್ಣನು ನೇರ ವರುಣನಲ್ಲಿಗೇ ಹೋದನು. ತನ್ನಲ್ಲಿಗೆ ಭಗವಂತನೇ ಬಂದುದನ್ನು ಕಂಡ ವರುಣನು ಅವನಿಗೆ ಯಥೋಚಿತ ಪೂಜೆ ಸಲ್ಲಿಸಿದನು. ಕೃಷ್ಣನನ್ನು ಬಹುವಿಧವಾಗಿ ಸ್ತುತಿಸಿ ತನ್ನ ಜನ್ಮ ಸಾರ್ಥಕವಾಯಿತೆಂದು ಹೇಳಿದನು. ತನ್ನೊಬ್ಬ ಮೂಢಸೇವಕನಿಂದ ನಡೆದ ಅಚಾತುರ್ಯಕ್ಕೆ ವಿಷಾದಿಸಿ ನಂದರಾಜನನ್ನು ಕೃಷ್ಣನ ಸಂಗಡ ಕಳುಹಿಸಿಕೊಟ್ಟನು. ಹಿಂದಕ್ಕೆ ಸುರಕ್ಷಿತವಾಗಿ ಬಂದ ನಂದನನ್ನು ನೋಡಿ ವೃಂದಾವನ ವಾಸಿಗಳು ಪರಮಾನಂದಗೊಂಡರು. ನಂದಗೋಪನು ವರುಣಲೋಕದಲ್ಲಿ ನಡೆದ ವಿದ್ಯಮಾನಗಳನ್ನು ಯಥಾವತ್ತಾಗಿ ವಿವರಿಸಿ ಹೇಳಿದನು. ಆಗ ಎಲ್ಲರಿಗೂ ಶ್ರೀಕೃಷ್ಣನು ಪರಮಾತ್ಮನೆಂಬುದು ದೃಢವಾಯಿತು. ಹಾಗೆ ತಿಳಿದಿದ್ದರಿಂದ ಅವರಿಗೆ ಪರಮಾತ್ಮನ ಪರಮಧಾಮವನ್ನು ಕಾಣುವ ಆಸೆಯುಂಟಾಯಿತು. ಆದರೆ ಅದನ್ನು ಕೃಷ್ಣನಿಗೆ ಹೇಳಲು ಸಂಕೋಚವಾಯಿತು. ಭಗವಂತನಿಗೆ ಅವರ ಅಂತರಂಗದ ಆಶಯ ಅರ್ಥವಾಯಿತು. ಅವರನ್ನೆಲ್ಲ ಬ್ರಹ್ಮಹ್ರದದಲ್ಲಿ ಮುಳುಗಿಸಿ ಮೇಲಕ್ಕೆಬ್ಬಿಸಿ ಬ್ರಹ್ಮಲೋಕದ ಮತ್ತು ತನ್ನ ಪರಂಧಾಮದ ದರ್ಶನ ಮಾಡಿಸಿದನು. ಅಲ್ಲಿ ವೇದಗಳು ಮೂರ್ತಿಮತ್ತಾಗಿ ಭಗವಂತನ ಸ್ತುತಿ ಮಾಡುವುದನ್ನು ನೋಡಿದರು. ಅವರ ವಿಸ್ಮಯಕ್ಕೆ ಪಾರವೇ ಇರಲಿಲ್ಲ.

### ಅಧ್ಯಾಯ-೪

ಗ್ರೀಷ್ಮ, ವರ್ಷಗಳು ನಿರ್ಗಮಿಸಿ ಶರತ್ ಆಗಮಿಸಿತು. ಅವು ಶರತ್ಕಾಲದ ಶುಭ್ರರಾತ್ರಿಗಳು. ಚಂದ್ರನ ಹಾಲ್ಬೆಳಕು ಎಲ್ಲೆಡೆ ಹರಡಿರುವ ಸಮಯ. ತನ್ನ ಯೋಗಮಾಯೆಯನ್ನು ಆಶ್ರಯಿಸಿದ ಮಾಯಾತೀತ ಪರಮಾತ್ಮನಿಗೆ ತನ್ನ ಪ್ರಿಯಭಕ್ತೆಯರಾದ ಗೋಪಿಕೆಯರ ಸಂಗಡ ರಾಸಲೀಲೆಯಾಡುವ ಮನಸ್ಸಾಯಿತು. ಅವನು ಯಮುನೆಯ ತಡಿಯ ವನಕ್ಕೆ ಹೋಗಿ ತನ್ನ ಕೊಳಲಿನಿಂದ ಸುಮಧುರಗಾನವನ್ನು ಸುರಿಸಲಾರಂಭಿಸಿದನು. ಅದನ್ನು ಕೇಳಿಸಿಕೊಂಡ ಗೋಪಸ್ತ್ರೀಯರು ಭಯ, ಲಜ್ಜೆಗಳನ್ನು ತೊರೆದು ಒಬ್ಬೊಬ್ಬರಾಗಿ ಶ್ರೀಕೃಷ್ಣನ ಹತ್ತಿರ ಧಾವಿಸಿ ಬಂದರು. ಹಾಲು ಕಾಯಿಸುತ್ತಿದ್ದ ಕೆಲವರು ಅದನ್ನು ಹಾಗೇ ಬಿಟ್ಟು ಓಡಿ ಬಂದರು. ಪತಿ ಸೇವೆಯಲ್ಲಿ ನಿರತರಾಗಿದ್ದ ಕೆಲವರು ಆ ಕೆಲಸವನ್ನು ಮರೆತು ಬಂದರು. ಊಟ ಮಾಡುತ್ತಿದ್ದವರ ಕತೆಯೂ ಅಷ್ಟೇ. ವೇಣುಲೋಲನ ಕೊಳಲಿನ ನಾದದ ಸೆಳೆತ ಹಾಗಿತ್ತು. ಅವರನ್ನು ಯಾರಿಂದಲೂ ತಡೆದು ನಿಲ್ಲಿಸಲಾಗಲಿಲ್ಲ. ಅವರ ಮನಸ್ಸು ಬುದ್ಧಿ, ಪ್ರಾಣಗಳು ಕೃಷ್ಣಾರ್ಪಿತವಾಗಿದ್ದವು. ನಿಜ ಹೇಳಬೇಕೆಂದರೆ ಕೃಷ್ಣಪ್ರೇಮದಿಂದಾಗಿ ಅವರು ಅವನಲ್ಲೇ ತಾದಾತ್ಮ್ಯ ಹೊಂದಿದ್ದರು. ಅವರು ಈಗ ಅಪ್ರಾಕೃತಶರೀರಿಗಳಾಗಿದ್ದರು. ಕರ್ಮಬಂಧನಗಳಿಂದ ಮುಕ್ತರಾಗಿದ್ದರು. ಆದುದರಿಂದ ಇಲ್ಲಿ ವ್ಯಭಿಚಾರ ಭಾವಕ್ಕೆ ಎಡೆಯೇ ಇರಲಿಲ್ಲ. ಕಾಮವು ಅದರ ಪರಾಕಾಷ್ಠೆಯಲ್ಲಿ ಆ ವಿಕಾರವನ್ನು ಮೀರಿಬಿಡುತ್ತದೆ. ದ್ವೇಷಾದಿಭಾವಗಳೂ ಅಷ್ಟೆ.

ಹೀಗೆ ತನ್ನ ಹತ್ತಿರ ಓಡೋಡಿ ಬಂದ ಗೋಪಿಯರಿಗೆ ಶ್ರೀಕೃಷ್ಣನು ಹೀಗೆ ಹೇಳಿದನು, “ಗೋಪೀಮಣಿಗಳೇ, ನಿಮಗೆ ಸ್ವಾಗತ. ಆದರೆ ನೀವೇಕೆ ಇಲ್ಲಿಗೆ ಬಂದಿರಿ? ನಿಮ್ಮ ನಿಮ್ಮ ಮನೆಗಳಲ್ಲಿ ನೀವು ಪಾಲಿಸಬೇಕಾದ ಕರ್ತವ್ಯಗಳಿವೆ. ನಿಮ್ಮ ಬಂಧು, ಬಾಂಧವರು, ಮಕ್ಕಳು, ಗಂಡಂದಿರು ಇವರೆಲ್ಲರ ಸೇವೆಯನ್ನು ಬಿಟ್ಟು ಹೀಗೆ ಇರುಳಲ್ಲಿ ಈ ವನಕ್ಕೆ ಬಂದದ್ದು ಉಚಿತವಲ್ಲ. ದಯಮಾಡಿ ಹಿಂದಿರುಗಿರಿ”. ತಮ್ಮ ಪರಮವಲ್ಲಭನ ಬಾಯಿಂದ ಈ ನಿಷ್ಠುರವಾದ ಮಾತನ್ನು ಕೇಳಿದ ಗೋಪಿಯರಿಗೆ ದಿಕ್ಕೇ ತೋಚದಂತಾಯಿತು. ಅವರ ಚಿಂತೆಗೆ ಮೇರೆಯೇ ಉಳಿಯಲಿಲ್ಲ. ಅವರು ಬಹಳ ದೈನ್ಯದಿಂದ ಕೃಷ್ಣನಲ್ಲಿ ನಿವೇದಿಸಿಕೊಂಡರು, “ಪರಮಪ್ರಿಯನೇ, ನಿನ್ನಲ್ಲೇ ಪ್ರಾಣವನ್ನಿಟ್ಟಿರುವ ನಮ್ಮನ್ನು ಹೀಗೆ ತಿರಸ್ಕರಿಸಬಹುದೇ? ನೀನು ಪರಮೇಶ್ವರ. ನಿನ್ನಲ್ಲೇ ಲಯವಾಗಿ ಹೋಗಿರುವ ನಮ್ಮನ್ನು ಲೌಕಿಕ ಸಂಬಂಧಗಳ, ಕರ್ತವ್ಯಗಳ ನೆಪವೊಡ್ಡಿ ಹಿಂದಕ್ಕೆ ಕಳುಹಿಸುವುದು ಸರಿಯೇ? ಆತ್ಮವಲ್ಲಭನೇ, ನಿನ್ನ ಸನ್ನಿಧಿಯಿಂದ ನಮ್ಮನ್ನು ದೂರ ದೂಡಬೇಡ. ನಮ್ಮ ಪರಿಶುದ್ಧ ಪ್ರೇಮವನ್ನು ಸ್ವೀಕರಿಸು ಪ್ರಭುವೇ”

ಇದರಿಂದ ಶ್ರೀಕೃಷ್ಣನಿಗೆ ಅವರ ಅಪ್ರಾಕೃತ ಪ್ರೇಮ ಭಾಸವಾಯಿತು. ಅಂತಹ ಪ್ರೇಮ ಅವರ ಪ್ರಾಕೃತ ಶರೀರಗಳನ್ನೂ ಪರಿಶುದ್ಧಗೊಳಿಸಿ ಕೃಷ್ಣನ ದಿವ್ಯ ಸಂಗಕ್ಕೆ ಯೋಗ್ಯವಾಗುವಂತೆ ಮಾಡಿತ್ತು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಲಕ್ಷಯತಿ-ಪಶ್ಯತಿ ಭಕ್ತಜನಾನ್ ಇತಿ ಲಕ್ಷ್ಮೀ**
ಅಂದರೆ ಉಪಾಸಕರನ್ನು ಕೃಪಾ ಕಟಾಕ್ಷದಿಂದ ವೀಕ್ಷಿಸುವವಳೇ ಲಕ್ಷ್ಮೀ.

**ಪುಸ್ತಕ ಪರಿಚಯ :**

**ನಾನು ಕಂಡ ನನ್ನ ದೇಶ** (ನೆನಪಿನ ಪುಟಗಳಿಂದ)
*ಲೇಖಕರು :* ಇನ್ನ ರಾಮ ಮೋಹನ್‌ರಾವ್
*ಕನ್ನಡಕ್ಕೆ :*
ಡಾ। ವಾಮನ ನಂದಾವರ, ಬಾಲಕೃಷ್ಣ ನಾಯ್ಕ್. ಡಿ.
*ಸಂಪಾದಕ :* ವೈ. ಅವನೀಂದ್ರನಾಥ್ ರಾವ್
*ಪ್ರಕಾಶನ :* ಪುಸ್ತಕಶಕ್ತಿ ಪ್ರಕಾಶನ, ಬೆಂಗಳೂರು
*ಬೆಲೆ :* ರೂ.150/-

ಸಂಪಾದಕರ ನುಡಿಯಲ್ಲಿ ವೈ. ಅವನೀಂದ್ರನಾಥ ರಾವ್ ತಿಳಿಸಿರುವಂತೆ - ಓರ್ವ ವ್ಯಕ್ತಿ ಜೀವಿತಾವಧಿಯಲ್ಲಿ ಇಷ್ಟೊಂದು ಸಾಧನೆಗಳನ್ನು ಮಾಡಬಹುದೇ ಎಂದು ಹುಬ್ಬೇರಿಸುವಂತೆ ರಾಮಮೋಹನ ರಾವ್ ಮಾಡಿದ್ದಾರೆ. ಭಾರತೀಯ ಸೈನ್ಯದ ವಕ್ತಾರನಾಗಿ, ಗಾಜಾ ಪಟ್ಟಿಯಲ್ಲಿ ವಿಶ್ವಸಂಸ್ಥೆಯ ತುರ್ತು ಪಡೆಯ ಸಂಪರ್ಕಾಧಿಕಾರಿಯಾಗಿ, ಭಾರತ-ಪಾಕಿಸ್ತಾನ ಯುದ್ಧಗಳ ಸೈನ್ಯದ ಬಾತ್ಮೀದಾರನಾಗಿ, ಸಮಸ್ಯಾತ್ಮಕ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರ ಹಾಗೂ ಪಂಜಾಬ್‌ನಂತಹ ರಾಜ್ಯಗಳ ಸಲಹೆಗಾರನಾಗಿ, ದ್ವೀಪ ರಾಷ್ಟ್ರಗಳಲ್ಲಿ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ದಣಿವರಿಯದೆ ದೇಶಕ್ಕಾಗಿ ದುಡಿದ ರಾಮಮೋಹನ ರಾವ್ ಅವರ ಕಾರ್ಯಕ್ಷಮತೆ ವಿಸ್ಮಯ ಮೂಡಿಸುತ್ತದೆ.

ಲೇಖಕರಾದ ಇನ್ನಾ ರಾಮಮೋಹನ ರಾವ್ ಹೇಳುವಂತೆ - ವಿವಿಧ ಹುದ್ದೆಗಳಲ್ಲಿ ನಾಲ್ಕು ದಶಕಗಳಿಗೂ ಮಿಕ್ಕಿ ನಾನೊಬ್ಬ ಪತ್ರಕರ್ತನಾಗಿ ಕೆಲಸ ಮಾಡಿದೆ. ಮಾಹಿತಿ ಅಧಿಕಾರಿ, ಸಾರ್ವಜನಿಕ ಸಂಪರ್ಕಾಧಿಕಾರಿ, ಸಂಪಾದಕ, ಕಮ್ಯುನಿಕೇಶನ್ ನಿರ್ದೇಶಕ, ಪ್ರಧಾನ ವಾರ್ತಾಧಿಕಾರಿ, ವಾರ್ತಾ ಸಲಹೆಗಾರನಾಗಿ ನನಗೆ ಕ್ರೀಡಾ ಕಾರ್ಯಕ್ರಮ, ಸಾರ್ವಜನಿಕ ಸಭೆಗಳಿಂದ ಹಿಡಿದು, ಪ್ರಮುಖ ಯುದಗಳ ಘಟನೆಯನ್ನು ಜನತೆಗೆ ತಿಳಿಸುವ ಅವಕಾಶ ದೊರಕಿತು.

ಪ್ರಕಾಶಕರಾದ ವೈ.ಕೆ. ಮೋಹನ್ ಕೃತಿಯ ಬಗ್ಗೆ ತಿಳಿಸುತ್ತಾರೆ - ದೇಶದ ಚರಿತ್ರೆಯಲ್ಲಿ ಆಗಿಹೋದ ಘಟನೆಗಳ ವಿವರಣೆಗಳನ್ನು ಹೊಂದಿರುವ ಹಾಗೂ ಅಧ್ಯಯನಕ್ಕೆ ಯೋಗ್ಯವಾದ ಈ ಕೃತಿಯನ್ನು ಪ್ರಜ್ಞಾವಂತ ಕನ್ನಡಿಗರು ಆಸಕ್ತಿಯಿಂದ ಸ್ವೀಕರಿಸುವವರು ಎಂದು ಆಶಿಸುತ್ತೇನೆ.

“ಶ್ರೀ ಐ. ರಾಮಮೋಹನ ರಾವ್ ಅವರ ಬರಹಗಳನ್ನು ಓದುವುದೆಂದರೆ ಸ್ವಾತಂತ್ರ್ಯೋತ್ತರ ಭಾರತದ ಬದಲಾಗುತ್ತಿರುವ ಸಾಮಾಜಿಕ ಹಾಗೂ ರಾಜಕೀಯ ಚರಿತ್ರೆಯನ್ನು ತಿಳಿದುಕೊಳ್ಳುವುದು ಎಂದೇ ಅರ್ಥ. ಶಕ್ತಿ ರಾಜಕಾರಣದ ಜೊತೆಯೇ ಇದ್ದು ಅವರು ಅದರ ಭಾಗವಾಗದೇ ಅದರಿಂದ ಬೇರೆಯಾಗಿಯೇ ನಿಂತು ಅದಕ್ಕೆ ಸಾಕ್ಷಿಯಾಗುತ್ತಾ ಹೋದದ್ದು ಅವರ ಕ್ರಿಯಾಶೀಲ ಚೈತನ್ಯಕ್ಕೆ ದೊಡ್ಡ ನಿದರ್ಶನ” ಎಂದು ಡಾ। ಪುರುಷೋತ್ತಮ ಬಿಳಿಮಲೆ ಅವರು ಕೃತಿಯ ಬಗ್ಗೆ ಅಭಿಪ್ರಾಯ ಪಡುತ್ತಾರೆ.

ಭಾರತದ ದೇಶ ಕಂಡ ನಾಲ್ವರು ಪ್ರಧಾನಿಗಳಾದ ರಾಜೀವ್‌ಗಾಂಧಿ, ವಿ.ಪಿ.ಸಿಂಗ್, ಚಂದ್ರಶೇಖರ್ ಹಾಗೂ ಪಿ.ವಿ.ನರಸಿಂಹ ರಾವ್ ಅವರ ಕಾಲದಲ್ಲಿ ದೇಶದ ಪ್ರಧಾನ ವಾರ್ತಾಧಿಕಾರಿಯಾಗಿ ಹಾಗೂ ಮಾಧ್ಯಮ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ ಕರ್ನಾಟಕದ ಉಡುಪಿ ಜಿಲ್ಲೆಯ ಇನ್ನಾ ರಾಮಮೋಹನರಾವ್ ಅವರ ಕೃತಿ “ನಾನು ಕಂಡ ನನ್ನ ದೇಶ” ಅಮೂಲ್ಯವಾದ ಸಂದೇಶವನ್ನು ದೇಶದ ಬಗ್ಗೆ ನೀಡುತ್ತದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೆಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

# ಕೊಕ್ರಾಡಿ : ವೈಭವದ ಬ್ರಹ್ಮಕಲಶಾಭಿಷೇಕ

ನಮ್ಮ ಸಮಾಜದ ಪುರಾತನ ದೇವಸ್ಥಾನಗಳಲ್ಲೊಂದಾದ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ ಇದರ ನವೀಕರಣ ಹಾಗೂ ಬಿಂಬಪುನಃಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶಾಭಿಷೇಕ ಮಹೋತ್ಸವವು ತಾ.6-4-2010 ಮಂಗಳವಾರ ಮೊದಲ್ಗೊಂಡು ತಾ.11-4-2010 ರವಿವಾರದಂದು ಸಂಪನ್ನಗೊಂಡಿತು. ಪ್ರತೀದಿನ ವೈದಿಕ ಕಾರ್ಯಕ್ರಮಗಳು ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮಗಳು ಮತ್ತು ಅನ್ನದಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು.

ತಾ.11-4-2010ನೇ ರವಿವಾರದಂದು ಪೂರ್ವಾಹ್ನ ಗಂಟೆ 9-20ರ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಬ್ರಹ್ಮಕಲಶಾಭಿಷೇಕದ ಧಾರ್ಮಿಕ ವಿಧಿ-ವಿಧಾನ ನೆರವೇರಿತು. ಬ್ರಹ್ಮಕಲಶೋತ್ಸವ ಹಾಗೂ ಶ್ರೀದೇವರ ಮಹಾಪೂಜೆಯನ್ನು ವೀಕ್ಷಿಸಿದ ಬಾಳೆಕುದ್ರು ಮಠದ ಶ್ರೀ ಶ್ರೀ ನೃಸಿಂಹಾಶ್ರಮ ಸ್ವಾಮೀಜಿಯವರು ತದನಂತರ ದೇಣಿಗೆಯನ್ನಿತ್ತು ಸಹಕರಿಸಿದ ವಿವಿಧ ದಾನಿಗಳನ್ನು ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಗೌರವಿಸಿದರು. ಮಧ್ಯಾಹ್ನ ಉತ್ಸವ ಬಲಿ, ಪ್ರಸಾದವಿತರಣೆ, ಅನ್ನಸಂತರ್ಪಣೆಯಲ್ಲಿ ಸಹಸ್ರಾರು ಭಕ್ತರು ಪಾಲ್ಗೊಂಡರು. ಶ್ರೀ ಕರುಣ್ ರಾವ್ ಬೆಳ್ಳೆಯವರ ನೇತೃತ್ವದಲ್ಲಿ ಸ್ಥಾನಿಕ ಸಮಾಜದ ಸುಮಾರು 800 ವರ್ಷಗಳಷ್ಟು ಹಳೆಯದಾದ ಈ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶವು ನಡೆಯಿತು. ಆ ದಿನ ಸಂಜೆ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ ಡಾ। ವೀರೇಂದ್ರ ಹೆಗ್ಗಡೆಯವರು ಭಾಗವಹಿಸಿ, ಶುಭ ಹಾರೈಸಿದರು.

# ಸ್ಥಾನಿಕ ಸಮಾಜದ ಬಹುಮುಖ ಪ್ರತಿಭೆ ಶ್ರೀಮತಿ ಸುಧಾಮೂರ್ತಿಗೆ "ಕರ್ನಾಟಕ ಕಲಾಶ್ರೀ"-ರಾಜ್ಯ ಪ್ರಶಸ್ತಿ



ಮೂಲತಃ ಕರಾವಳಿಯ ಕಾಸರಗೋಡಿನವರಾದ ನೃತ್ಯ, ಸಂಗೀತ ವಿದುಷಿ ಶ್ರೀಮತಿ ಸುಧಾಮೂರ್ತಿ ಇದೀಗ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ "ಕರ್ನಾಟಕ ಕಲಾಶ್ರೀ" ಪುರಸ್ಕೃತರಾಗಿದ್ದಾರೆ. ಇದು ಅವರಿಗೆ ದೊರೆತ ಎರಡನೆಯ ರಾಜ್ಯ ಪ್ರಶಸ್ತಿಯಾಗಿದ್ದು, ಈ ಹಿಂದೆ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಕೂಡಾ 2005ರಲ್ಲಿ ಅವರಿಗೆ ಲಭಿಸಿತ್ತು. ಕಾಸರಗೋಡಿನ ಖ್ಯಾತ ನ್ಯಾಯವಾದಿಗಳೂ, ಶಿವಬ್ರಾಹ್ಮಣ ಸಭಾದ ಅಧ್ಯಕ್ಷರೂ, ಸ್ಥಾನಿಕ ಸಮಾಜದ ಹಿರಿಯರೂ ಆದ ಶ್ರೀ ಎ. ವಿ. ಶ್ಯಾನುಭೋಗ್‌ರವರ ಪುತ್ರಿ ಸುಧಾ, ನಾಟ್ಯಾಭ್ಯಾಸ ಪ್ರಾರಂಭಿಸಿದ್ದು ಮಂಗಳೂರಿನ ವಿದ್ವಾನ್ ಉಳ್ಳಾಲ ಮೋಹನ ಕುಮಾರರಲ್ಲಿ, ಗುರು ರಾಜರತ್ನಂ ಪಿಳ್ಳೆ ಮತ್ತು ನಾಟ್ಯಾಚಾರ್ಯ ಎಂ. ವಿಷ್ಣುದಾಸ್‌ರವರ ಬಳಿಯೂ ನೃತ್ಯ ಕಲಾಭ್ಯಾಸ ಮಾಡಿದರಲ್ಲದೇ, ಉಪ್ಪಳ ಕೃಷ್ಣ ಮಾಸ್ತರರ ಹತ್ತಿರ ಯಕ್ಷಗಾನವನ್ನೂ ಕಲಿತು ಕಾಸರಗೋಡಿನ ಮಹಿಳಾ ಯಕ್ಷಗಾನ ಮಂಡಳಿಯ ಪ್ರಮುಖ ವೇಷಧಾರಿಯಾಗಿ ಮಿಂಚಿದ್ದಾರೆ. ಉತ್ತಮ ಗಾಯಕಿಯೂ ಆಗಿರುವ ಸುಧಾಮೂರ್ತಿ ವಿದುಷಿ ರಾಧಾ ಮುರಳೀಧರ್, ವಿದ್ವಾನ್ ರಮಣನ್ ಮತ್ತು ವಿದ್ವಾನ್ ಬಿ. ಗುರುಸಿದ್ಧಪ್ಪನವರ ಬಳಿ ಕರ್ನಾಟಕ ಸಂಗೀತಾಭ್ಯಾಸ ಮಾಡಿದ್ದಾರೆ.

ಕಳೆದ 25 ವರ್ಷಗಳಿಂದಲೂ ಪತಿ ಉಳ್ತೂರು ವಿಷ್ಣುಮೂರ್ತಿರಾಯರ ಸಹಕಾರದಿಂದ ಚಳ್ಳಕೆರೆ ಎಂಬಲ್ಲಿ "ನೃತ್ಯನಿಕೇತನ" ಎಂಬ ಸಾಂಸ್ಕೃತಿಕ ಶಿಕ್ಷಣ ಕೇಂದ್ರ ನಡೆಸಿಕೊಂಡು ಬರುತ್ತಾ, ರಾಜ್ಯ-ಹೊರರಾಜ್ಯ-ಹೊರರಾಷ್ಟ್ರಗಳಲ್ಲಿ ತಮ್ಮದೇ ಆದ ತಂಡ ರೂಪಿಸಿಕೊಂಡು ನೃತ್ಯ ಪ್ರದರ್ಶನ ನೀಡಿದ್ದಾರೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಗಳು ನಡೆಸುವ ವಾರ್ಷಿಕ ಭರತನಾಟ್ಯ ಪರೀಕ್ಷೆಗಳ ಪರಿವೀಕ್ಷಕರಾಗಿಯೂ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸರ್ಕಾರ ನೀಡುವ ಪ್ರಶಸ್ತಿಗಳ ಆಯ್ಕೆ ಸಮಿತಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ರಾಜ್ಯ, ಅಂತರರಾಜ್ಯ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ಇವರನ್ನು ಚಿತ್ರದುರ್ಗ ನಗರಸಭೆ ಗೌರವದಿಂದ "ಪೌರ ಸನ್ಮಾನ" ನೀಡಿ ಸತ್ಕರಿಸಿದೆ. ಸುಬ್ರಹ್ಮಣ್ಯ ಸಭೆ ಶತಮಾನೋತ್ಸವ ಸಮಾರಂಭದಲ್ಲಿ ಸನ್ಮಾನಿಸಿದೆ.

ನಮ್ಮ ಸ್ಥಾನಿಕ ಸಮಾಜದ ಈ ಪ್ರತಿಭಾವಂತ ಮಹಿಳೆಗೆ, ಕಳೆದ ಏಪ್ರಿಲ್ 12ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪರವಾಗಿ, ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ಸಚಿವ ಶ್ರೀ ಸುರೇಶ್‌ಕುಮಾರ್ "ಕರ್ನಾಟಕ ಕಲಾಶ್ರೀ" ಪ್ರಶಸ್ತಿ ನೀಡಿ ಸನ್ಮಾನಿಸಿದರು.

ವರದಿ : ಯು. ಮಂಜುನಾಥರಾವ್,
C/o ಸಾಗರ್ ಟ್ರೇಡರ್ಸ್, ಬೆಂಗಳೂರು

## ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳು ಉಡುಪಿಗೆ..... (...1ನೇ ಪುಟದಿಂದ)

### ಕಾರ್ಯಕ್ರಮಗಳ ವಿವರ

**ತಾ.6-6-2010 ಆದಿತ್ಯವಾರ**

- ಸಂಜೆ 6-00 ಗಂಟೆಗೆ ಶ್ರೀಶಾರದಾ ಮಂಟಪಕ್ಕೆ ಶ್ರೀ ಶ್ರೀ ಜಗದ್ಗುರುಗಳ ಆಗಮನ. ಪೂರ್ಣಕುಂಭ ಸ್ವಾಗತದೊಂದಿಗೆ ಮೆರವಣಿಗೆಯಲ್ಲಿ ಜಗದ್ಗುರುಗಳನ್ನು ಬರಮಾಡಿಕೊಳ್ಳುವುದು.
- 6-30 ಗಂಟೆಗೆ ಧೂಳೀ ಪಾದಪೂಜೆಯ ನಂತರ ಗುರುಗಳು ಆಹ್ನಿಕಕ್ಕೆ ತೆರಳುವರು.
- ಗಂಟೆ 7-30ರಿಂದ ಶಾರದಾ ಚಂದ್ರಮೌಳೀಶ್ವರ ಪೂಜೆ-ಭಕ್ತಾದಿಗಳಿಂದ ಪಾದಪೂಜೆ, ಭಜನೆ-ಸ್ತೋತ್ರಪಠಣ... ಅನ್ನಸಂತರ್ಪಣೆ.

**ವಿ.ಸೂ. : ಪಾದಪೂಜೆ ಮಾಡಬಯಸುವವರು ಕಾರ್ಯದರ್ಶಿ, ಶ್ರೀ ಬಿ. ಕೃಷ್ಣಮೂರ್ತಿ ರಾವ್ (ದೂರವಾಣಿ : 9663049590), ಶ್ರೀ ಯು. ಪ್ರಫುಲ್ಲ ಚಂದ್ರ (ದೂರವಾಣಿ : 9880896166), ಶಾರದಾ ಮಂಟಪದ ಮೆನೇಜರ್ (ದೂರವಾಣಿ : 2520754) ಇವರಿಗೆ ತಾ.6-6-2010ರ ಮಧ್ಯಾಹ್ನ 2 ಗಂಟೆಯೊಳಗೆ ತಿಳಿಸಬೇಕು.**

**ತಾ.7-6-2010 ಸೋಮವಾರ**

- ಬೆಳಿಗ್ಗೆ 7-00 ಗಂಟೆಯಿಂದ ಪ್ರಾತಃ ಪೂಜೆ
- ಜಗದ್ಗುರುಗಳಿಂದ ಆಶೀರ್ವಚನ
- ಮಂತ್ರಾಕ್ಷತೆ
- 9-00 ಗಂಟೆಗೆ ಜಗದ್ಗುರುಗಳು ಕಟಪಾಡಿಯ ಕಾರ್ಯಕ್ರಮಕ್ಕೆ ತೆರಳಲಿದ್ದಾರೆ.
- ಮಧ್ಯಾಹ್ನ 1-00 ಗಂಟೆಗೆ ಜಗದ್ಗುರುಗಳ ಪುನರಾಗಮನ-ಭಿಕ್ಷಾ ಕಾರ್ಯಕ್ರಮ-ಶಿಷ್ಯ ವೃಂದಕ್ಕೆ ಅನ್ನಸಂತರ್ಪಣೆ.
- ಸಂಜೆ 4-00 ಗಂಟೆಗೆ ಜಗದ್ಗುರುಗಳ ನಿರ್ಗಮನ.

## ಇನ್ನ ರಾಮಮೋಹನ ರಾವ್ ಅವರ "ನಾನು ಕಂಡ ನನ್ನ ದೇಶ" ಕೃತಿ ಬಿಡುಗಡೆ (...1ನೇ ಪುಟದಿಂದ)

ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಹಾಗೂ ಐತಿಹಾಸಿಕ ಘಟನೆಗಳ ವಿವರಗಳು ಈ ಕೃತಿಯಲ್ಲಿದ್ದು, ಇದರ ಮೂಲ ಲೇಖನಗಳು ಆಂಗ್ಲ ಭಾಷೆಯಲ್ಲಿದೆ. ಕೃತಿಯ ಸಂಪಾದಕ ವೈ. ಅವನೀಂದ್ರನಾಥ್ ರಾವ್ ಅವರು ಈ ಸಂದರ್ಭದಲ್ಲಿ ಮಾತನಾಡಿದರು.

ಬಿಹಾರದ ಮಾಜಿ ರಾಜ್ಯಪಾಲ ಡಾ। ಎಂ. ರಾಮಾಜೋಯಿಸ್ ಅಧ್ಯಕ್ಷತೆ ವಹಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರ ಪಂಡಿತ್ ಸುಧಾಕರ ಚತುರ್ವೇದಿ, ನಾಡೋಜ ಪ್ರೊ। ಜಿ. ವೆಂಕಟಸುಬ್ಬಯ್ಯ, ಹಿರಿಯ ವಿಮರ್ಶಕ ಎಲ್.ಎಸ್. ಶೇಷಗಿರಿ ರಾವ್, ಲೇಖಕ ಜೀ.ವಿ. ಕುಲಕರ್ಣಿ ಭಾಗವಹಿಸಿದ್ದರು. ಸಮಾರಂಭದಲ್ಲಿ ವೈ. ಅವನೀಂದ್ರನಾಥ್ ರಾವ್ ಅವರನ್ನು ಸನ್ಮಾನಿಸಲಾಯಿತು. 'ಪುಸ್ತಕ ಶಕ್ತಿ'ಯ ಒಟ್ಟು 8 ಕೃತಿಗಳು ಅನಾವರಣಗೊಂಡಿತು.

ಪ್ರೊ। ಎಂ. ಧ್ರುವನಾರಾಯಣ ಸ್ವಾಗತಿಸಿದರು. 'ಪುಸ್ತಕ ಶಕ್ತಿ'ಯ ಪ್ರಕಾಶಕ ವೈ. ಕೆ. ಮೋಹನ್ ಉಪಸ್ಥಿತರಿದ್ದರು. ಬೆಂಗಳೂರು ದೂರದರ್ಶನದ ಶ್ರೀಮತಿ ಮೀನಾ ಗೋಪಾಲಕೃಷ್ಣ ಕಾರ್ಯಕ್ರಮ ನಿರೂಪಿಸಿದರು. ಈ ಕೃತಿಗೆ ಶ್ರೀ ಉಮೇಶ್, (ದೂರವಾಣಿ : 09972129376) ಇವರನ್ನು ಸಂಪರ್ಕಿಸಬಹುದು.

# ಅಂಚೆ ಚೀಟಿ ಪ್ರದರ್ಶನ : ಮಕ್ಕಳ ಆಸಕ್ತಿ

ಅಂಚೆ ಇಲಾಖೆ ಉಡುಪಿ ವಿಭಾಗ ಆಶ್ರಯದಲ್ಲಿ ಮಾ.30ರಂದು ಉಡುಪಿ ಪಲಿಮಾರು ಮಠದ ವಿದ್ಯಾಮಾನ್ಯ ಸಭಾಭವನದಲ್ಲಿ ನಡೆದ ಅಂಚೆ ಚೀಟಿ ಪ್ರದರ್ಶನ ಮತ್ತು ಕಾರ್ಯಾಗಾರದಲ್ಲಿ ವಿಶೇಷವಾಗಿ ಶಾಲಾ ಮಕ್ಕಳು ಆಸಕ್ತಿಯಿಂದ ಪಾಲ್ಗೊಂಡರು.

ಪ್ರದರ್ಶನವನ್ನು ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಅಂಬಾತನಯ ಮುದ್ರಾಡಿಯವರು ಉದ್ಘಾಟಿಸಿದರು. ಅಂಚೆ ಅಧೀಕ್ಷಕ ಪಿ. ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಅಂಚೆ ಚೀಟಿ ಸಂಗ್ರಾಹಕರ ಸಂಘದ ಮುಂದಾಳು ಎಂ.ಕೆ.ಕೃಷ್ಣಯ್ಯ ಉಪಸ್ಥಿತರಿದ್ದರು. ಸಹಾಯಕ ಅಂಚೆ ಅಧೀಕ್ಷಕ ರಾಜಶೇಖರ ಭಟ್ ಸ್ವಾಗತಿಸಿ ಸುರೇಶ ಕೆ. ಕಾರ್ಯಕ್ರಮ ನಿರ್ವಹಿಸಿದರು. ಸುರೇಖಾ ರಾವ್ ವಂದಿಸಿದರು. ಅಂಚೆ ಚೀಟಿ ಸಂಗ್ರಾಹಕರಾದ ಶ್ರೀ ಎಂ.ಕೆ. ಕೃಷ್ಣಯ್ಯ, ಡೇನಿಯಲ್ ಮೊಂತೆರೋ ಬ್ರಹ್ಮಾವರ, ಜಯಪ್ರಕಾಶ್ ಮತ್ತು ವಿಶ್ವೇಶ್ ಅವರ ಸಂಗ್ರಹದ ಅಂಚೆಚೀಟಿಗಳನ್ನು ಪ್ರದರ್ಶಿಸಲಾಯಿತು. ಡೇನಿಯಲ್ ಮೊಂತೆರೋ ಮಕ್ಕಳಿಗೆ ಅಂಚೆ ಚೀಟಿ ಹವ್ಯಾಸದ ಕುರಿತು ತಿಳಿಸಿದರು.

ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.

ಸಂಪರ್ಕಿಸಿರಿ :
**ಕೆ. ರಾಮಮೂರ್ತಿ ಭಟ್, ಪುರೋಹಿತರು**
ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010

ಉಡುಪಿ ವಿಶಿಷ್ಟ ರುಚಿಯುಳ್ಳ
**Rao's 'ಮಾತೃಛಾಯಾ'ರವರ**
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
**ಭಾರತ್ ಸ್ಟೋರ್ಸ್**
ರಥಬೀದಿ, ಉಡುಪಿ - 576 101. ಫೋನ್ : 2522444

## ನಿಧನ

### ಕುಸುಮಾ ಎಸ್. ರಾವ್

ದಿ| ಮಠಂತಬೆಟ್ಟು ಎಸ್. ಸುಬ್ರಾಯರ ಧರ್ಮಪತ್ನಿ ಶ್ರೀಮತಿ ಕುಸುಮಾ ಎಸ್. ರಾವ್ (68 ವ)ರವರು ತಾ.5-4-2010ರಂದು ದೈವಾಧೀನರಾಗಿರುತ್ತಾರೆ. ಇವರು ಇಬ್ಬರು ಪುತ್ರರು, ಒಬ್ಬ ಪುತ್ರಿಯನ್ನು ಅಗಲಿದ್ದಾರೆ. ಇವರ ಅಳಿಯ ಪಿ. ಎಮ್. ನಾಗರಾಜರಾವ್ ಸಂಘದ ನಿರ್ದೇಶಕರಾಗಿದ್ದಾರೆ.

### ಐ. ಕೃಷ್ಣ ರಾವ್

ಕಡಿಯಾಳಿಯ ಐ. ಕೃಷ್ಣರಾವ್ ಇವರು ತಾ.11-04-2010ರಂದು ತಮ್ಮ 92ನೇ ವಯಸ್ಸಿನಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಈರ್ವರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

### ಕೆ. ಶಂಕರ ರಾವ್

ಕುಡುಪು ದೊಡ್ಡಮನೆ ಶ್ರೀ ಶಂಕರರಾಯರು ತಾ.16-04-2010ರಂದು ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

### ದಿನೇಶ ರಾವ್

ತಾ.17-4-2010ರಂದು ದಿ| ಕಟಪಾಡಿ ಮೂಡಬೆಟ್ಟು ರಾಮಕೃಷ್ಣ ರಾಯರ ಪುತ್ರ ದಿನೇಶ ರಾವ್‌ರವರು ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. 48 ವರ್ಷ ಪ್ರಾಯದ ದಿವಂಗತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

### ಸೀತಾವತಿ

ತಾ.27-4-2010ರಂದು ಕ್ಯಾದಿಗೆ ಅಲ್ಲಿಪಾದೆ ದಿ| ಬಾಲಾಜಿರಾವ್‌ರವರ ಪತ್ನಿ ಸೀತಾವತಿ (ಕರಂಬಳ್ಳಿ ಕೃಷ್ಣರಾಯರ ಪುತ್ರಿ) ಇವರು ತಮ್ಮ 67ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. ದಿವಂಗತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

### ಲಕ್ಷ್ಮೀದೇವಿ

ತಾ.27-4-2010ರಂದು ಎರ್ಮಾಳಿನ ದಿ| ವೈ.ನಾರಾಯಣರಾವ್ ಇವರ ಪತ್ನಿ ಲಕ್ಷ್ಮೀದೇವಿ ಇವರು ತಮ್ಮ 82 ವರ್ಷ ಪ್ರಾಯದಲ್ಲಿ ಎರ್ಮಾಳಿನ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರರು ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ವಿಳಾಸ ಬದಲಾವಣೆ

ಬಿ. ಬಾಲಕೃಷ್ಣ
ಮೆನೇಜರ್, ಕರ್ನಾಟಕ ಬ್ಯಾಂಕ್ ಲಿ.,
ಪಿ.ಬಿ.ನಂ.11, ರೆಡ್ಡಿ ಜನ ಸಂಘ ಕಟ್ಟಡ,
ಶ್ರೀ ಯೋಗಿ ವೇಮನ ಕಾಂಪ್ಲೆಕ್ಸ್,
ಬಿ. ಡಿ. ರಸ್ತೆ, ಚಿತ್ರದುರ್ಗ - 577 501.

★★★★

P.DINESH RAO
#102, 1st Floor, Ultimate Shelters,
Venkateshwara Colony,
New Thippasandra,
Bangalore -560 075

## ವೃಷಭ ಮಾಸ ವಿಶೇಷ ದಿನಗಳು

| | |
|---|---|
| 14-05-2010 | ವೃಷಭ ಸಂಕ್ರಮಣ ಅಮಾವಾಸ್ಯ |
| 16-05-2010 | ಅಕ್ಷಯ ತೃತೀಯಾ |
| 18-05-2010 | ಶ್ರೀ ಶಂಕರ ಜಯಂತೀ |
| 24-05-2010 | ಸರ್ವೈಕಾದಶೀ |
| 25-05-2010 | ಪ್ರದೋಷಃ, ಮಳೆ ನಕ್ಷತ್ರ ರೋಹಿಣೀ ಪ್ರಾರಂಭ |
| 27-05-2010 | ಪೂರ್ಣಿಮಾ |
| 31-05-2010 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ, ಗಂ.9.59ಕ್ಕೆ |
| 06-06-2010 | ಮಳೆನಕ್ಷತ್ರ, ಮೃಗಶಿರಾ ಪ್ರಾರಂಭ, ಸರ್ವೈಕಾದಶೀ |
| 10-06-2010 | ಪ್ರದೋಷಃ |
| 12-06-2010 | ಅಮಾವಾಸ್ಯ |
| 14-05-2010 | ಮಿಥುನ ಸಂಕ್ರಮಣ |

## ಅಭಿನಂದನೆ



### ರೋಹಿತ್ ರಾವ್

ಬಾರಕೂರು ''ಶ್ರೀಹರಿಕೃಪಾ''ದಲ್ಲಿ ವಾಸವಾಗಿರುವ ಶ್ರೀಮತಿ ಶೋಭಾ ಮತ್ತು ಪಿ. ಜಯರಾಮ ರಾವ್ ಇವರ ಪುತ್ರ ರೋಹಿತ್ ರಾವ್ ಇವರು ದ್ವಿತೀಯ ಪಿಯುಸಿಯಲ್ಲಿ ಶೇ.97 ಅಂಕಗಳನ್ನು ಗಳಿಸಿದ್ದಾರೆ. ಉಡುಪಿಯ ವಿದ್ಯೋದಯ ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಇವರು ಕಾಲೇಜಿಗೆ ಪ್ರಥಮ ಸ್ಥಾನಿಯಾಗಿದ್ದಾರೆ. ಇವರಿಗೆ ''ಶ್ರೀಶಾರದಾ'' ಅಭಿನಂದನೆಗಳು.



### ಶುಭ ಎ. ಎಸ್.

ಹಾಸನ ಜಿಲ್ಲೆ ಬೇಲೂರಿನಲ್ಲಿ ವಾಸವಾಗಿರುವ ಡಾ| ಸಂತೋಷ್‌ಕುಮಾರ್ ಅಡೂರು ಮತ್ತು ಡಾ| ಗೀತಾ ಇವರ ಪುತ್ರಿ ಶುಭ ಎ. ಎಸ್. ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.92.48 ಅಂಕಗಳನ್ನು ಗಳಿಸಿ ವಿಶೇಷ ಸಾಧನೆಯನ್ನು ಮಾಡಿದ್ದಾರೆ. ಇವರು ಬೇಲೂರು ಪೂರ್ಣಪ್ರಜ್ಞ ವಿದ್ಯಾ ಸಂಸ್ಥೆಯ ವಿದ್ಯಾರ್ಥಿನಿ. ಇವರಿಗೆ ''ಶ್ರೀಶಾರದಾ'' ಅಭಿನಂದನೆಗಳು.



### ಅರುಣ ಕುಮಾರ್ ಎಮ್.

ಬ್ರಹ್ಮಾವರ ಶ್ರೀ ಅರುಣ ಕುಮಾರ್ ಎಮ್. ಇವರು ಇತ್ತೀಚೆಗೆ ಬೆಂಗಳೂರಿನಲ್ಲಿ ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್ ಇವರು ನಡೆಸಿದ ಎಂ.ಡಿ. (ಆಯುರ್ವೇದಿಕ್) ಪ್ರವೇಶ ಪರೀಕ್ಷೆಯಲ್ಲಿ 12ನೇ ರ್‍ಯಾಂಕ್ ಪಡೆದಿರುತ್ತಾರೆ. ಇವರು ಬ್ರಹ್ಮಾವರದ ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀ ಅಶೋಕ ರಾವ್ ದಂಪತಿಗಳ ಪುತ್ರ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಬಿ. ಸೌರಭ್‌ರಾವ್ ಉನ್ನತ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್‌ಗೆ ಪ್ರಯಾಣ



ಉಡುಪಿಯ ಬಿ. ಸೌರಭ್‌ರಾವ್ ಇವರು ಯುನ್ಯಾಟೆಡ್ ಕಿಂಗ್‌ಡಂನ ಎಬರ್ಡೀನ್ ಕಾಲೇಜ್, ಸ್ಕಾಟ್ಲೆಂಡ್ ಇಲ್ಲಿ ಎಂ.ಬಿ.ಎ. ಉನ್ನತ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್‌ಗೆ ತೆರಳಿದ್ದಾರೆ.

ಇವರು ನಿಟ್ಟೆಯ ತಾಂತ್ರಿಕ ಮಹಾವಿದ್ಯಾಲಯ (NMAMIT)ದಿಂದ ಬಿ.ಇ. (ಕಂಪ್ಯೂಟರ್ಸ್) ಪದವಿ ಪಡೆದಿರುತ್ತಾರೆ. ಇವರು ಉಡುಪಿಯ ಬಿ. ಜಯರಾಮ ರಾವ್ (ಸಿಂಡಿಕೇಟ್ ಬ್ಯಾಂಕಿನ ಉದ್ಯೋಗಿ) ಮತ್ತು ಶ್ರೀಮತಿ ವೀಣಾ ಜಯರಾಮ ರಾವ್(ಸ್ಟೇಟ್ ಬ್ಯಾಂಕಿನಲ್ಲಿ ಉದ್ಯೋಗಿ) ಇವರ ಪುತ್ರ. ಸೌರಭ್‌ರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

## ಗೃಹಪ್ರವೇಶ

ಪ್ರೊ| ಶಂಕರರಾವ್ ಕಾಳಾವರ ಇವರ ಪುತ್ರ ಚಿ| ಅಮರೇಶ್, ಬೆಂಗಳೂರಿನ ITPL/WHITE FIELD ರಸ್ತೆಯ ಕುಂದಲಹಳ್ಳಿಯ ಗೇಟ್ ಬಳಿಯ ಗುಲ್‌ಮೊಹರ್ ರಸ್ತೆಯ ಬಳಿ ನಿರ್ಮಿಸಿದ ನೂತನ ಗೃಹ (ಫ್ಲ್ಯಾಟ್) 'ಕ್ಷಮಾ'ದ ಪ್ರವೇಶೋತ್ಸವವನ್ನು ತಾ.16-5-2010ರಂದು ನೆರವೇರಿಸಿದರು.

## ಶುಭ ಜನನ

ಎಮ್. ಪಾಲಚಂದ್ರರಾವ್ ಇವರ ದ್ವಿತೀಯ ಪುತ್ರ ಎಮ್. ನಾಗೇಶ ರಾವ್ ಹಾಗೂ ಶ್ರೀಮತಿ ಸೌಮ್ಯ ದಂಪತಿಗಳಿಗೆ ತಾ.18-4-2010ರಂದು ಹೆಣ್ಣು ಮಗುವಿನ ಜನನ.

## ಬ್ರಹ್ಮೋಪದೇಶ

### ಚಿ| ಶ್ರೀಕಂಠ

ತಾ.11-4-2010ರಂದು ಶ್ರೀಮತಿ ಮತ್ತು ಶ್ರೀ ಬಿ. ನಾಗೇಶ ರಾಯರ ಪುತ್ರ ಚಿ| ಶ್ರೀಕಂಠನಿಗೆ ಬಾರ್ಕೂರಿನ ಕಚ್ಚೂರು ಶ್ರೀ ನಾಗೇಶ್ವರ ದೇವರ ಸನ್ನಿಧಿಯಲ್ಲಿ ಬ್ರಹ್ಮೋಪದೇಶ ಜರಗಿತು.

### ಚಿ| ಸನತ್ ಶಂಕರ್

ತಾ.1-4-2010ರಂದು ಎಲ್ಲೂರಿನ ಶ್ರೀಮತಿ ಮತ್ತು ಶ್ರೀ ಶಿವಾನಂದರ ಪುತ್ರ ಚಿ| ಸನತ್ ಶಂಕರ್‌ನಿಗೆ ಸ್ವಗೃಹ ಕೃಷ್ಣ ಮಂದಿರದಲ್ಲಿ ಬ್ರಹ್ಮೋಪದೇಶ ಜರಗಿತು.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ಸೈನಸೈಟಿಸ್ ಎಂದರೇನು? ಇದರ ಚಿಕಿತ್ಸೆ ಹೇಗೆ?** — ಡಾ| ವೈ. ಸುದರ್ಶನ ರಾವ್

**ಉತ್ತರ:** ತಲುಬುರುಡೆಯ ಹಿಂಭಾಗವು ಟೊಳ್ಳಾಗಿದ್ದು ಅದರೊಳಗೆ ಮೆದುಳು ಇದೆ. ಆದರೆ ಮುಖ ಎಂದು ಕರೆಯುವ ತಲುಬುರುಡೆಯ ಮುಂದಿನ ಭಾಗವು ಗಟ್ಟಿಯಾದ ಎಲುಬಿನಿಂದ ಮಾಡಲ್ಪಟ್ಟಿದೆ. ಪುನಃ ಈ ಗಟ್ಟಿ ಎಲುಬಿನ ಒಳಗೆ ಗಾಳಿ ತುಂಬಿರುವ ಟೊಳ್ಳು ಪ್ರದೇಶಗಳಿವೆ. ಈ ಟೊಳ್ಳು ಪ್ರದೇಶಗಳಿಗೆ ಸೈನಸ್ ಎಂದು ಕರೆಯುವರು. ಹಣೆಯ ಮುಂಭಾಗದಲ್ಲಿ ಕಣ್ಣು ಹಾಗೂ ಮೂಗು ಕೂಡುವಲ್ಲಿ, ಮೂಗಿನ ಹೊಳ್ಳೆಗಳ ಎಡ ಹಾಗೂ ಬಲಭಾಗದಲ್ಲಿ ಈ ಸೈನಸ್‌ಗಳಿರುತ್ತವೆ. ಪ್ರತೀ ಸೈನಸ್ ಪ್ರತ್ಯೇಕ ನಾಳದ ಮುಖಾಂತರ ಮೂಗಿನ ಸಂಪರ್ಕ ಹೊಂದಿದೆ ಹಾಗೂ ಮೂಗಿನಲ್ಲಿ ಕಾಣುವ ಕೆಂಪು ಚರ್ಮವು ಈ ಸೈನಸ್‌ಗಳೊಳಗೂ ವ್ಯಾಪಿಸಿದೆ. ಮೂಗಿನಲ್ಲಿ ಸುರಿಯುವ ಸಿಂಬಳವೆಂಬ ಮ್ಯೂಕಸ್ ಪದಾರ್ಥವು ಈ ಸೈನಸ್‌ಗಳಲ್ಲೂ ಸ್ರವಿಸಲ್ಪಡುತ್ತದೆ. ಅದೇ ರೀತಿ ಮೂಗಿನಿಂದ ಉಸಿರಾಡುವ ಗಾಳಿಯೂ ಈ ಸೈನಸನ್ನೂ ಪ್ರವೇಶಿಸುತ್ತದೆ. ಸೈನಸ್‌ಗಳೊಳಗೆ ಗಾಳಿ ತುಂಬಿರುವುದರ ಪರಿಣಾಮವೇನೆಂದರೆ ತಲೆಬುರುಡೆಯ ಭಾರ ತುಂಬಾ ಕಡಿಮೆಯಾಗುವುದು. (ಸೈನಸೈಟಿಸ್ ರೋಗಿಗಳಲ್ಲಿ ಈ ಸೈನಸ್‌ನಲ್ಲಿ ನೀರು ಅಥವಾ ಕೀವು ತುಂಬಿರುವುದರಿಂದ ತಲೆ ಭಾರವೆನಿಸುತ್ತದೆ) ಅದೇ ರೀತಿ ಸೈನಸ್‌ಗಳೊಳಗೆ ಸ್ರವಿಸಿದ ಮ್ಯೂಕಸ್ ಮೂಗಿಗೆ ಬಂದು ಮೂಗನ್ನು ತೇವವಾಗಿಡುತ್ತದೆ. ಅಷ್ಟೇ ಅಲ್ಲ, ಮೂಗಿನ ಮೂಲಕ ಶ್ವಾಸಕೋಶವನ್ನು ತಲುಪುವ ಗಾಳಿಯಲ್ಲಿರುವ ಧೂಳಿನ ಕಣಗಳು ಅದಕ್ಕೆ ಅಂಟಿಕೊಂಡು ಕೇವಲ ಶುದ್ಧ ಗಾಳಿ ಮಾತ್ರ ಶ್ವಾಸಕೋಶವನ್ನು ಪ್ರವೇಶಿಸುವಂತೆ ಮಾಡುತ್ತದೆ.

ನಮಗೆ ನೆಗಡಿಯಾದಾಗ ಹೇಗೆ ಮೂಗಿನ ಕೆಂಪು ಚರ್ಮವು ಊದಿಕೊಂಡು ನೀರಿಳಿಯುತ್ತದೋ ಅದೇ ರೀತಿ ಸೈನಸ್‌ನ ಚರ್ಮವು ಊದಿಕೊಂಡು ನೀರಿಳಿಯಲಾರಂಭಿಸಿದರೆ ಅದನ್ನು ಸೈನಸೈಟಿಸ್ ಎಂದು ಕರೆಯುವರು. ಕೆಲವರಲ್ಲಿ ಸೈನಸ್‌ಗಳನ್ನು ಮೂಗಿಗೆ ಸಂಪರ್ಕಿಸುವ ನಾಳಗಳು ವಿವಿಧ ಕಾರಣಗಳಿಂದ ಮುಚ್ಚಿರುತ್ತವೆ. ಆಗ ಈ ನೀರು ಸೈನಸ್‌ಗಳಲ್ಲೇ ತುಂಬಿಕೊಂಡು ಬಿಟ್ಟು ಇನ್ನೂ ಹೆಚ್ಚಿನ ತೊಂದರೆಗಳು ಉದ್ಭವಿಸುತ್ತವೆ. ನೆಗಡಿ, ತಲೆಭಾರ, ಜ್ವರ, ತಲೆನೋವು, ರಾತ್ರಿ ಹೊತ್ತಿನಲ್ಲಿ ಕೆಮ್ಮು, ಮೂಗಿನಿಂದ ಗಂಟಲಿಗೆ ಕಫ ಇಳಿಯುವುದು, ಮೂಗು ವಾಸನೆ ಬರುವುದು ಇವೆಲ್ಲಾ ಸೈನಸೈಟಿಸ್‌ನ ಚಿಹ್ನೆಗಳು. ತಲೆಯ ಎಕ್ಸ್-ರೇ ಅಥವಾ ಸ್ಕ್ಯಾನ್ ಮುಖಾಂತರ ಈ ಖಾಯಿಲೆಯನ್ನು ಪತ್ತೆ ಹಚ್ಚಬಹುದು.

ಧೂಳು, ಹೊಗೆ ಹಾಗೂ ಅಲರ್ಜಿ ಪ್ರಕೃತಿಗಳು ನೆಗಡಿ ಹಾಗೂ ಸೈನಸೈಟಿಸ್‌ಗಳಿಗೆ ಮುಖ್ಯ ಕಾರಣಗಳು. ಮೀಣಜೀವಿಗಳ ಬಾಧೆಯೂ ಇದಕ್ಕೆ ಇನ್ನೊಂದು ಕಾರಣ. ಹೆಚ್ಚಿನ ಕೇಸುಗಳಲ್ಲಿ ಇದು ತನ್ನಿಂತಾನಾಗಿ ಒಂದು ವಾರದ ಅವಧಿಯಲ್ಲಿ ಕಡಿಮೆಯಾಗುತ್ತದೆ. ಒಂದು ವೇಳೆ ಸೈನಸ್‌ಗಳನ್ನು ಮೂಗಿಗೆ ಸಂಪರ್ಕಿಸುವ ನಾಳಗಳು ಮುಚ್ಚಿ ಹೋಗಿದಲ್ಲಿ ಸೈನಸ್‌ಗಳಲ್ಲಿ ಸ್ರವಿಸಿದ ಸ್ರಾವವು ಅಲ್ಲೇ ನಿಂತು ಕೀವಾಗಿ ಪರಿವರ್ತಿತವಾಗುವುದು. ಇಂತಹ ರೋಗಿಗಳು ಔಷಧಿಯನ್ನು ತೆಗೆದುಕೊಂಡಾಗ ಉಪಶಮನ ಕಂಡುಬಂದರೂ ಅವರು ಪದೇ ಪದೇ ಇದೇ ತೊಂದರೆಗಳಿಂದ ಬಳಲುವರು.

ಸೈನಸೈಟಿಸ್ ಇರುವ ರೋಗಿಗಳು ಧೂಳು ಹಾಗೂ ಹೊಗೆಯಿಂದ ದೂರವಿರಬೇಕು. ಅಂತಹ ವಾತಾವರಣದಲ್ಲಿ ಮಾಸ್ಕ್ ಧರಿಸುವುದು ಅಥವಾ ಮೂಗಿಗೆ ಅಡ್ಡವಾಗಿ ಬಟ್ಟೆ ಇಟ್ಟುಕೊಳ್ಳುವುದು ಉತ್ತಮ ಉಪಾಯ. ತಮಗೆ ಅಲರ್ಜಿ ಇರುವ ವಸ್ತುಗಳನ್ನು ಗುರುತಿಸಿಟ್ಟುಕೊಂಡು ಮುಂದೆ ಅದರ ಸಂಪರ್ಕಕ್ಕೆ ಹೋಗಬಾರದು. ಚಳಿಯ ವಾತಾವರಣದಲ್ಲಿ ಹಾಗೂ ತಂಪು ಪಾನೀಯ ಸೇವನೆಯಿಂದ ಈ ತೊಂದರೆ ಮರುಕಳಿಸುವ ಸಾಧ್ಯತೆ ಹೆಚ್ಚು. ಸೈನಸೈಟಿಸ್ ಆದಾಗ ಆಂಟಿಬಯಾಟಿಕ್‌ಗಳ ಸೇವನೆಯಿಂದ ಉತ್ತಮ ಆದರೆ ತಾತ್ಕಾಲಿಕ ಉಪಶಮನ ಸಿಗುತ್ತದೆ. ಇತ್ತೀಚಿನವರೆಗೂ ಇದೊಂದೆ ಈ ಖಾಯಿಲೆಯ ಚಿಕಿತ್ಸೆಯಾಗಿತ್ತು. ಈಗ ಪದೇ ಪದೇ ಸೈನಸೈಟಿಸ್‌ನಿಂದ ಬಳಲುವವರಿಗೆ ಸೈನಸ್‌ಗಳ ಸ್ರಾವವು ಸರಾಗವಾಗಿ ಮೂಗಿಗೆ ಇಳಿಯುವಂತೆ ಮಾಡುವ ಫೆಸ್ (FESS) ಎಂಬ ಹೊಸ ಶಸ್ತ್ರಚಿಕಿತ್ಸಾ ವಿಧಾನವು ಖಾಯಂ ಉಪಶಮನ ನೀಡುವ ಮೂಲಕ ಸೈನಸೈಟಿಸ್‌ನ ಚಿಕಿತ್ಸೆಗೆ ಹೊಸ ತಿರುವು ನೀಡಿದೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸ್ಯಾಟಿ (ನಿ.)

(ಎಲ್.ನಂ.31017)
ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ - 576 101.
ಫೋನ್ : 0820-2522408

### ವಿಶೇಷ ಸರ್ವಸದಸ್ಯರ ಸಭೆಯ ನೋಟೀಸು

ನಮ್ಮ ಸೊಸ್ಯಾಟಿಯ ವಿಶೇಷ ಸರ್ವಸದಸ್ಯರ ಸಭೆಯು ತಾ.29-05-2010ನೇ ಶನಿವಾರ ಅಪರಾಹ್ನ 4-00 ಗಂಟೆಗೆ ಸೊಸ್ಯಾಟಿಯ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಮಾನ್ಯ ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.

### ಕಾರ್ಯಕ್ರಮ

1. 2008-2009ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅಂಗೀಕಾರ
2. 2008-2009ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ

**ಆಡಳಿತ ಮಂಡಳಿಯ ನಿರ್ದೇಶನದಂತೆ**

ಕಾರ್ಯದರ್ಶಿ ಅಧ್ಯಕ್ಷರು

## ದಾಸರವಾಣಿ ಯಕ್ಷಗಾನ ಸಿ.ಡಿ.ಶ್ರೀಶಾರದಾ ಮಂಟಪದಲ್ಲಿ ಲಭ್ಯ

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಇವರ ದಾಸರವಾಣಿ ಯಕ್ಷಗಾನ ಸಿ.ಡಿ.ಯು ಶ್ರೀಶಾರದಾ ಮಂಟಪದಲ್ಲಿ ದೊರೆಯುತ್ತದೆ. ಆಸಕ್ತರು ಸಿ.ಡಿ.ಯನ್ನು ಖರೀದಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

## ವಧೂ-ವರರ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

- ಅಧ್ಯಕ್ಷರು, ಮಹಿಳಾ ವೇದಿಕೆ,
ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2

## SRI SUBRAHMANYA SEVA SANGHA

14/B-1, Shubhkarma Co-op. Hsg. Soc. Ltd., Karmakshetra,
S.S.S. Nagar, Near Shanmukhanand Hall, Koliwada, Mumbai - 400 037.
Tel. :24014343

Sri Subrahmanya Seva Sangha, Mumbai awards (as in every year) the following prizes to students (of Stanika Community) who have scored the highest aggregate marks in the final examination held by any of the Maharashtra Boards in the year 2009.

1) Two Prizes of Rs.4,000/- each to a girl and a boy student in HSC (Science)

2) Two Prizes of Rs.2,000/- each to a girl and a boy student in HSC (Arts) and

3) Two Prizes of Rs.2,000/- each to a girl and a boy student in HSC (Commerce)

The applications along with the certified mark lists should reach the Hon. Secretary, Sri Subrahmanya Seva Sangha, 5, Anubhav, 93, Garodia Nagar, Ghatkopar (East), Mumbai - 400 077. Tel. :25061652 by 10th June 2010. The Prizes will be awarded on the occassion of Annual General Body meeting on 13th June 2010 at Gokul, Sion, Mumbai - 400 022. These prizes are instituted by M/s. Santurkar Brothers (Shri Purushotam V.Santurkar and Shri Sarvottam V.Santurkar) and their families in memory of late Shri Santur Venkatrao.

-Umashankar S. Rao, Hon. Secretary

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ

ಪ್ರತಿ ಬುಧವಾರ : ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವೇದಿಕೆಯಿಂದ)

ಪ್ರತಿ ಶುಕ್ರವಾರ : ''ಭಜನೆ'' ಸಂಜೆ 5-00 ಗಂಟೆಯಿಂದ (ಮಹಿಳಾ ವೇದಿಕೆಯಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-00ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.31-05-2010) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.12-06-2010 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ಶುದ್ಧ ಪಂಚಮಿಯಂದು (ತಾ.18-05-2010) ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವೈದ್ಯಕೀಯ ನೆರವು ವೇದಿಕೆ

### ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾ ನಗರ, ಕುಂಜಿಬೆಟ್ಟು , ಉಡುಪಿ

ಈ ತಿಂಗಳಲ್ಲಿ ವೈದ್ಯಕೀಯ ನೆರವು ವೇದಿಕೆಯಿಂದ ಈ ಕೆಳಗಿನ ಸಮಾಜ ಬಾಂಧವರಿಗೆ ವೈದ್ಯಕೀಯ ನೆರವು ನೀಡಲಾಗಿದೆ.

1) ಕೆ. ಶ್ರೀನಿವಾಸರಾವ್, ಕಿಲ್ಪಾಡಿ - ರೂ.3,000/-
2) ಉಪೇಂದ್ರ ಹೆಬ್ಬಾರ್, ಹೇರಾಡಿ ಗ್ರಾಮ, ಬಾರ್ಕೂರು - ರೂ.3,000/-
3) ಗೋಪಾಲಕೃಷ್ಣ ರಾವ್, ಒಳಕಾಡು, ಉಡುಪಿ - ರೂ.3,000/-

ನೆರವಿನ ಅಗತ್ಯವುಳ್ಳ ನಮ್ಮ ಸಮಾಜ ಬಾಂಧವರು ಅರ್ಜಿ ಕಳುಹಿಸಬೇಕಾದ ವಿಳಾಸ: ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ-576102.

ವೈದ್ಯಕೀಯ ನೆರವು ವೇದಿಕೆಯ ಮಹದುದ್ದೇಶದ ಯೋಜನೆಯನ್ನು ಯಶಸ್ವಿಯಾಗಿಯೂ, ನಿರಂತರವಾಗಿಯೂ ನಡೆಸುವಂತಾಗಲು ಸಮಾಜ ಬಾಂಧವರು ದೇಣಿಗೆಗಳನ್ನು ''ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಳಿತಾಯ ಖಾತೆ ನಂ.220/2928 ಸಿಂಡಿಕೇಟ್ ಬ್ಯಾಂಕ್, ರಥಬೀದಿ ಬ್ರಾಂಚ್'' ಈ ಹೆಸರಿನಲ್ಲಿ ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576 102 : ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

- ಅಧ್ಯಕ್ಷರು ಮತ್ತು ಸಂಚಾಲಕರು, ವೈದ್ಯಕೀಯ ನೆರವು ವೇದಿಕೆ

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org